


ದಿನ ಸಾಕು; ಒಂದು ವಾರದಲ್ಲೇ ಸ್ಪೋಕನ್ ಇಂಗ್ಲಿಷ್ ಕಲಿಸುತ್ತೇವೆ ಇತ್ಯಾದಿ ಪ್ರಲೋಭನೆ ಅಲ್ಲಿರುತ್ತದೆ. ಅದೇಕೊ ಹೊಸಪೇಟೆ ಕಡೆಯ ಬಸ್ಸುಗಳಲ್ಲಿ ಜ್ಯೋತಿಷ್ಯದ ಜಾಹೀರಾತು ಸ್ಟಿಕ್ಕರುಗಳು ಹೆಚ್ಚು. ಈ ಮಾಂತ್ರಿಕ ಜ್ಯೋತಿಷಿಗಳು ಬಗೆಹರಿಸುವ ಸಮಸ್ಯೆಗಳ ಪಟ್ಟಿಯಲ್ಲಿ 'ಸ್ತ್ರೀಪುರುಷ ವಶೀಕರಣಕ್ಕೆ ಗಂಧರ್ವ ಸಂಮೋಹಿನಿ ಯಂತ್ರ'ದ ಆಶ್ವಾಸನೆಯೂ ಸೇರಿದೆ. ಉಚಿತ ಪಾಸನ್ನು ಪಡೆದು ಬಾಗಿಲಿಗೆ ನೇತುಬಿದ್ದು ಪಯಣಿಸುವ ಕಾಲೇಜು ಹುಡುಗರು, ಈ ಯಂತ್ರ ಕಟ್ಟಿಕೊಂಡು ಸಂಮೋಹನ ಮಾಡುವ ಶೋಚನೀಯ ಸ್ಥಿತಿಗಿನ್ನೂ ತಲುಪಿಲ್ಲ. ಬಹುಶಃ ಇದು ಮಧ್ಯವಯಸ್ಕರನ್ನು ಮನಸ್ಸಲ್ಲಿಟ್ಟುಕೊಂಡು ಕೊಡಲಾದ ಜಾಹಿರಾತು. ಹಿಂದೆ ರಾಜಕಾರಣಿಗಳು ಉಳಿದುಕೊಳ್ಳುವ ಬೆಂಗಳೂರಿನ ಪ್ರಸಿದ್ಧ ಹೋಟೆಲುಗಳಲ್ಲಿ, ಕೋಣೆಯನ್ನು ಖಾಯಮಾಗಿ ಪಡೆದುಕೊಂಡ ಜ್ಯೋತಿಷಿಗಳ ಬೋರ್ಡು ಇರುತ್ತಿತ್ತು. ಎಲ್ಲೆಲ್ಲಿ ಆರ್ಥಿಕ, ರಾಜಕೀಯ, ಸಾಂಸಾರಿಕ ಅಭದ್ರತೆ ಇರುತ್ತದೆಯೊ, ಅಲ್ಲೆಲ್ಲ ಇಂತಹ ಸ್ಟಿಕ್ಕರು-ಬೋರ್ಡುಗಳು ಸಹಜ ಎಂದು ಕಾಣುತ್ತದೆ.

ಹೋಟೆಲು ಅಂಗಡಿಗಳ ಬೋರ್ಡುಗಳು ನಮ್ಮ ಸಮಾಜ ವ್ಯವಸ್ಥೆಯನ್ನು ಬಿಂಬಿಸುತ್ತವೆ. ಅಂಡ್ ಸನ್ಸ್ ಎಂಬ ಒಕ್ಕಣೆಯನ್ನು ಗಮನಿಸಿ. ಮಾಲಕನಿಗೆ ಹೆಣ್ಣುಮಕ್ಕಳಿಲ್ಲ ಅಂತಲ್ಲ. ಕೊಟ್ಟ ಹೆಣ್ಣು ಕುಲಕ್ಕೆ ಹೊರಗಾಗಿ, ಆಸ್ತಿ ಗಂಡುಮಗನಿಗೆ ವರ್ಗಾವಣೆ ಆಗುವ ವ್ಯವಸ್ಥೆಯ ಫಲವಾಗಿ ಆ ಬೋರ್ಡುಬರೆಹ ಬಂದಿದೆ.

ಒಮ್ಮೆ ಅರಣ್ಯ ಇಲಾಖೆಯವರು ರಸ್ತೆಬದಿಯಲ್ಲಿ 'ಕಾಡಿಲ್ಲದ ಊರು ಮಕ್ಕಳಿಲ್ಲದ ಬಂಜೆಯಂತೆ' ಎಂದು ಬರೆದ ಫಲಕ ನೆಟ್ಟಿದ್ದರು. ಯಾರೋ 'ವಾಚಕರ ವಾಣಿ'ಗೆ ಬರೆದು ಮಂಗಳಾರತಿ ಎತ್ತಿರಬೇಕು. ಬಳಿಕ ಅದು ಕಾಣೆಯಾಯಿತು.

ಲಿಂಗಾಯತ ಖಾನಾವಳಿ, ಬ್ರಾಹ್ಮಣರ ಫಲಾಹಾರ ಮಂದಿರ ಬೋರ್ಡುಗಳು ನನಗೆ ಕುತೂಹಲ ಹುಟ್ಟಿಸುತ್ತವೆ. ಅವು ಜಾತಿಗೂ ಊಟಕ್ಕೂ ಸಂಬಂಧ ಕಲ್ಪಿಸಿವೆ. ಆದರೆ, ಕೆಲವೊಮ್ಮೆ ಸತ್ಯ ಬೇರೆಯೇ ಇರುತ್ತದೆ. ಒಮ್ಮೆ ನಮ್ಮ ಬಡಾವಣೆಯ ಅಯ್ಯಂಗಾರ್ ಬೇಕರಿಯಲ್ಲಿ ವಿಚಾರಿಸಿದೆ. ಅವರು ಅಯ್ಯಂಗಾರ್ ಆಗಿರಲಿಲ್ಲ. ನಿರ್ದಿಷ್ಟ ವಸ್ತುಗಳಿಗೆ ಖ್ಯಾತವಾದ ಊರಿನ ಉಲ್ಲೇಖವಿರುವ ಬೋರ್ಡುಗಳೂ ಹೀಗೇ. ನಮ್ಮ ಕಡೆ ಶೆಟ್ಟರ ಅಂಗಡಿಗಳಲ್ಲಿ ಹೊಳೇನರಸೀಪುರದ ಬೆಣ್ಣೆ, ಅಂಬಾಮಣಿ ನಸ್ಯ, ನಂಜನಗೂಡಿನ ರಸಬಾಳೆ ಎಂಬ ಫಲಕಗಳಿದ್ದವು. ನಸ್ಯ ಮತ್ತು ಬಾಳೆ ವಿಷಯದಲ್ಲಿ